DAY & DATE: THURSDAY, OCTOBER 29th, 2026

Matter: BNMIT is Launching Centre of Excellence in Innovation in Deeptech & Clean Energy in association with GreenH2 India & New Energy Opportunities Limited (NEO) Australia

As appeared in the Newspapers:

VIJAYAVANI
(Bengaluru City Express, Page No. 8B)

ವಿಜಯವಾಣಿ
ಕನ್ನಡಿಗರ ಧ್ವನಿ
ನಂ. ಕನ್ನಡ ದಿನಪತ್ರಿಕೆ

ಡೀಪ್ ಟೆಕ್ನಾಲಜಿ, ಕ್ಲೀನ್ ಎನರ್ಜಿ ಸಂಶೋಧನೆಗೆ ಆದ್ಯತೆ

ಬಿಎನ್‌ಎಂಐಟಿಯಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಿಎನ್‌ಎಂಐಟಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಎನ್‌ಎಂಐಟಿ), ಗ್ರೀನ್ ಎಚ್2 ಇಂಡಿಯಾ ಮತ್ತು ಹೊಸ ಇಂಧನ ಅವಕಾಶಗಳ ಕಂಪನಿ (ನಿಯೋ) ಜತೆಗೂಡಿ ತನ್ನ ಕ್ಯಾಂಪಸ್‌ನಲ್ಲಿ 'ಡೀಪ್‌ಟೆಕ್ ಮತ್ತು ಕ್ಲೀನ್ ಎನರ್ಜಿ ಕ್ಷೇತ್ರದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಇನ್ನೋವೇಷನ್' ಅನ್ನು ತೆರೆದಿದೆ.

ಈ ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಗ್ರೀನ್‌ಎಚ್-2 ಇಂಡಿಯಾ ಕಂಪನಿಯ ಸಿಇಒ ಜಯ್ ಸಿನ್ಹಾ, ಬಿಎನ್ ಎಂಐಟಿಯ ಅಧ್ಯಕ್ಷ ನಾರಾಯಣ ರಾವ್ ಆರ್. ಮಾನೆ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಗ್ರೀನ್‌ಎಚ್-2 ಇಂಡಿಯಾ ಕಂಪನಿಯ ಸಿಇಒ ಜಯ್ ಸಿನ್ಹಾ, 'ದೇಶದಲ್ಲಿ ಕ್ಲೀನ್ ಎನರ್ಜಿ ಮತ್ತು ಡೀಪ್ ಟೆಕ್ ಬಗ್ಗೆ ಹಲವಾರು ಸಂಶೋಧನೆಗಳು ಪ್ರಗತಿಯಲ್ಲಿವೆ. ನಾವು ಈ ಕ್ಷೇತ್ರದ ಬಗ್ಗೆ ಸಂಶೋಧನೆಯನ್ನು ಕೈಗೆತ್ತುಕೊಳ್ಳುವುದಕ್ಕೆ ಪ್ರೋತ್ಸಾಹಿಸುವ ಸಲುವಾಗಿ ಈ ಕಾಲೇಜಿನಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರವನ್ನು ತೆರೆದಿದ್ದೇವೆ. ಇದರಿಂದ ವಿದ್ಯಾರ್ಥಿಗಳು ಮತ್ತು ಬೋಧಕರು ಹೆಚ್ಚು ಸಂಶೋಧನೆ ನಡೆಸಬಹುದು. ಅವರ ಪ್ರಾಜೆಕ್ಟ್‌ಗಳನ್ನು ನಾವು ಉತ್ಪನ್ನವಾಗಿ ಪರಿವರ್ತಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಕಲ್ಪಿಸಿಕೊಡುತ್ತೇವೆ ಎಂದರು.

ಈ ಕೇಂದ್ರವು ಇಂಜಿನಿಯರ್‌ಗಳ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿಕೊಡುವುದು, ಹಸಿರು ಇಂಧನಕ್ಕೆ ಪ್ರಾಮುಖ್ಯತೆಯನ್ನು ನೀಡುವುದು, ಪರ್ಯಾಯ ಇಂಧನ ಶೇಖರಣೆ, ಬ್ಯಾಟರಿಯ ಪುನರ್ಬಳಕೆ, ಡಿಜಿಟಲ್ ಟ್ವಿನ್ಸ್ ಎನರ್ಜಿ ಗ್ರಿಡ್‌ಗಳ ಕುರಿತು ಹೆಚ್ಚಿನ ಅಧ್ಯಯನಕ್ಕೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಈ ವೇಳೆ ಆಲಾಯ್ ಪಾರ್ಟನರ್ ಸಿಇಒ ಎಲಿಯಟ್ ಪಾರ್ಕರ್, ಕ್ಲಾಸಿಕ್ ಟೆಕ್ನಾಲಜಿಯ ಉಪಾಧ್ಯಕ್ಷ ಅಕಿರಾ ತನಕ, ಗ್ರಫೈನ್ ಇನೋವೇಷನ್ ಮಾಚಿನ್ಟರ್ನ ಸಿಇಒ ಡಾ. ವಿವೇಕ್ ಕೊಂಚೆರಿ, ಬಿಎನ್‌ಎಂಐಟಿಯ ಅಧ್ಯಕ್ಷ ನಾರಾಯಣ ರಾವ್ ಆರ್. ಮಾನೆ, ನಿರ್ದೇಶಕ ಪ್ರೊ. ಟಿ. ಜೆ. ರಾಮಮೂರ್ತಿ, ಹೆಚ್ಚುವರಿ ನಿರ್ದೇಶಕ ಹಾಗೂ ಪ್ರಾಂಶುಪಾಲ ಡಾ.ಎಸ್.ವೈ. ಕುಲಕರ್ಣಿ, ಡೀನ್ ಪ್ರೊ.ಈಶ್ವರ್ ಎನ್. ಮಾನೆ, ಉಪನಿರ್ದೇಶಕ ಡಾ.ಜಿ.ಎನ್. ಕೃಷ್ಣಮೂರ್ತಿ ಇದ್ದರು.



ವಿಜಯವಾಣಿ

ಬಿಎನ್‌ಎಂಐಟಿಯಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಉದ್ಘಾಟನೆ ವೇಳೆ ನಾರಾಯಣ ರಾವ್ ಆರ್. ಮಾನೆ, ಜಯ್ ಸಿನ್ಹಾ, ಎಲಿಯಟ್ ಪಾರ್ಕರ್, ಅಕಿರಾ ತನಕ, ಡಾ. ವಿವೇಕ್ ಕೊಂಚೆರಿ ಮತ್ತಿತರರಿದ್ದರು.

> ಆಸ್ಟ್ರೇಲಿಯಾ, ಅಮೆರಿಕ ಮತ್ತು ಇಸ್ರೇಲ್ ಹೊರತುಪಡಿಸಿದರೆ, ಇದೇ ಮೊದಲ ಬಾರಿಗೆ ಭಾರತದಲ್ಲಿ ಈ ಕೇಂದ್ರವನ್ನು ನಮ್ಮ ಕಾಲೇಜಿನಲ್ಲಿ ತೆರೆಯಲಾಗಿದೆ. ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿರುವ ಕಂಪನಿಗಳು ಈ ಕೇಂದ್ರದ ಜತೆಗೆ ಸಹಯೋಗವನ್ನು ಮಾಡಿಕೊಂಡಿವೆ. ಇದರಿಂದ ಡೀಪ್ ಟೆಕ್ ಮತ್ತು ಗ್ರೀನ್‌ಟೆಕ್ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ಮಾಡಲು ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ.
> **| ನಾರಾಯಣ ರಾವ್ ಆರ್.ಮಾನೆ**
> ಅಧ್ಯಕ್ಷ, ಬಿಎನ್‌ಎಂಐಟಿ